

ತಿಷ್ಯರಕ್ಷಿತಾಳನ್ನು ವರಿಸಲು ಕೇವಲ ಆ ಅಪೂರ್ವ ಚೆಲುವನ್ನು ಅನುಭವಿಸಬೇಕೆಂಬ ವಾಂಛೆಯೊಂದೇ ಕಾರಣವಾಗಿತ್ತೆ ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡಾಗ ಪ್ರತಿಸಲವೂ ಸಿಗುವ ಉತ್ತರ 'ಇಲ್ಲ' ಎಂದೇ.

ವಯಸ್ಸು ಕಳೆದಂತೆ ನಾನು ಮಾಡಿದ ಪಾಪಕೃತ್ಯಗಳು ಧುತ್ತನೆ ಎದ್ದು ನಿಂತು ನನ್ನೆದುರು ವಿಕಾರವಾಗಿ ನರ್ತಿಸಿ ಭಯಭೀತನನ್ನಾಗಿಸುತ್ತಿದ್ದವು. ಹೌದು, ಭೀತಿ ಎಂಬುದು ನನ್ನ ಹೊಕ್ಕಳಿನಾಳದಿಂದ ಎದ್ದು ಸಮಸ್ತ ಶರೀರಕ್ಕೆ ವ್ಯಾಪಿಸಿ ರುದ್ರನರ್ತನಕ್ಕೆ ತೊಡಗಿ ನನ್ನನ್ನು ನಡುಗಿಸಿ ಬಿಡುತ್ತಿತ್ತು. ಸೋದರರನ್ನು ನಿರ್ದಯವಾಗಿ ಕೊಂದಿದ್ದು, ತಂದೆ ವೃದ್ಧ ಬಿಂದುಸಾರನನ್ನು, ತಾಯಿಯೊಂದಿಗೆ ಕಾರಾಗೃಹಕ್ಕೆ ದೂಡಿದ್ದು, ಮದೋನ್ಮತ್ತನಾಗಿ ಅನೇಕ ಅಮಾಯಕ ಪ್ರಜೆಗಳನ್ನು ಕ್ರೂರವಾಗಿ ಹಿಂಸಿಸಿದ್ದು, ನನ್ನ ದಾರಿಗೆ ಅಡ್ಡ ಬಂದವರನ್ನೆಲ್ಲ ಭೀಷಣವಾಗಿ ಕೊಂದು ಹಾಕಿದ್ದು, ಈ ಎಲ್ಲ ನೆನಪುಗಳು ನನ್ನ ಇರುಳ ನಿದ್ದೆಯನ್ನು ಕಸಿದುಕೊಂಡಿದ್ದವು. ಈ ಭೀತ ಹೃದಯಕ್ಕೆ ಒಂದಿಷ್ಟು ಸಾಂತ್ವನ ಬೇಕಾಗಿತ್ತು; ಬಿಸಿರಕ್ತದ ಬೆಚ್ಚನೆಯ ಅಪ್ಪುಗೆಯ ಸಾಂತ್ವನ. ನನ್ನ ಕಳೆದು ಹೋದ ಯೌವನವನ್ನು ಮತ್ತೆ ಸ್ಪರ್ಶಿಸಬಹುದಾದ ಒಂದು ದಿವ್ಯ ಅವಕಾಶ. ಅದನ್ನು ತಿಷ್ಯರಕ್ಷಿತಾಳಿಂದ ಪಡೆಯಬಯಸಿದೆ. ನನ್ನ ಸ್ವಾರ್ಥ ಲಾಲಸೆಗಾಗಿ ಆ ರಮ್ಯ ಬದುಕನ್ನು ಹಾಳುಗೆಡವುತ್ತಿರುವೆ ಎಂಬುದನ್ನೂ ಪರಿಗಣಿಸದೆ ಮಾಡಿದ ತಪ್ಪು ಅದು. ಯೌವನದಲ್ಲಿ ಗೈದ ತಪ್ಪಿಗೆ ಶಿಕ್ಷೆ ಅನುಭವಿಸಲು ವೃದ್ಧಾಪ್ಯದ ಬದುಕುಂಟು. ಆದರೆ, ವೃದ್ಧಾಪ್ಯದ ತಪ್ಪಿಗೆ? ಸಾವೊಂದೇ ಪರಿಹಾರ.

ಮಹಾರಾಣಿ ತಿಷ್ಯರಕ್ಷಿತಾಳ ಆಗಮನವನ್ನು ಸೂಚಿಸುವ ಪ್ರಹರಿಯ ಧ್ವನಿ. ವಿರಾಮಾಸನದಿಂದ ಎದ್ದು ಮುಖಕ್ಕೆ ಜಲಪ್ರಕ್ಷಾಳನ ಮಾಡುವುದಕ್ಕೂ, ತಿಷ್ಯರಕ್ಷಿತಾ ವಿಶ್ರಾಂತಿಗೃಹವನ್ನು ಪ್ರವೇಶಿಸುವುದಕ್ಕೂ ಸರಿ ಹೋಯಿತು.

ಜಗದ ಉತ್ಸಾಹವೇ ನಡೆದು ಬಂದಂತೆ ನನ್ನೆಡೆಗೆ ಉಟ್ಟ ದುಕೂಲದ ನೆರಿಗೆಗಳನ್ನು ತೂರುತ್ತ ಬಂದ ತಿಷ್ಯ 'ಮಹಾಪ್ರಭು' ಎಂದು ಪ್ರೀತಿ–ಅನುನಯದಿಂದ ಕರೆಯುತ್ತ, ಕೈಹಿಡಿದು ಮತ್ತೆ ವಿರಾಮಾಸನದಲ್ಲಿ ಕೂಡಿಸಿದಳು. ಕೈಸನ್ನೆಯಿಂದ ಅಲ್ಲಿದ್ದ ಚೇಟಿಯರನ್ನೆಲ್ಲ ಹೊರಹೋಗಲು ಸೂಚಿಸಿ, ಜಲಪ್ರಕ್ಷಾಳನದಿಂದ ತೇವವಾಗಿದ್ದ ನನ್ನ ಮುಖವನ್ನು ಅಂಗವಸ್ತ್ರದಿಂದ, ತನ್ನ ಮೃದು ಕರಗಳಿಂದ ಒರೆಸತೊಡಗಿದಳು. ಮುಖ ಒರೆಸುತ್ತಿದ್ದ ಕೈ ಕುತ್ತಿಗೆಯತ್ತ ಜಾರಿ,